**ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದು**

36 (48) **ಶ್ರೀ ನಾಡಗೌಡ ವೆಂಕಟರಾವ್** (ಸಿಂಧನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಸಿಂಧನೂರು ತಾಲ್ಲೂಕ್‌ನಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಈ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮತ್ತು ಅರೆ ಉಪನ್ಯಾಸಕರ ಸಂಖ್ಯೆ ಎಷ್ಟು ; (ವಿವರಗಳನ್ನು ನೀಡುವುದು)

ಇ) ಈ ತಾಲ್ಲೂಕ್‌ನಲ್ಲಿರುವ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–**

ಅ)

| | | |
|---|---|---|
| ಸರ್ಕಾರಿ | – | 08 |
| ಅನುದಾನಿತ | – | 01 |
| ಅನುದಾನರಹಿತ | – | 15 |
| ಒಟ್ಟು | – | 24 |

ಆ)

| | | |
|---|---|---|
| ಸರ್ಕಾರಿ ಪದವಿ ಪೂರ್ವ ಕಾಲೇಜು | – | 18 |
| ಅನುದಾನಿತ ಪದವಿ ಪೂರ್ವ ಕಾಲೇಜು | – | 08 |
| ಅರೆ ಉಪನ್ಯಾಸಕರು | – | ಯಾರೂ ಇಲ್ಲ |

| ವಿಷಯ | ಸರ್ಕಾರಿ ಪದವಿ ಪೂರ್ವ ಕಾಲೇಜು | ಅನುದಾನಿತ ಪದವಿ ಪೂರ್ವ ಕಾಲೇಜು |
|---|---|---|
| ಕನ್ನಡ | 02 | 01 |
| ಇಂಗ್ಲೀಷ್ | 03 | 01 |
| ಇತಿಹಾಸ | 02 | 01 |
| ಅರ್ಥಶಾಸ್ತ್ರ | 03 | 01 |
| ರಾಜ್ಯಶಾಸ್ತ್ರ | 02 | 01 |
| ಸಮಾಜಶಾಸ್ತ್ರ | 04 | 01 |
| ವಾಣಿಜ್ಯ | 02 | 01 |
| ದೈಹಿಕ ಶಿಕ್ಷಣ | – | 01 |
| ಒಟ್ಟು | 18 | 08 |

ಇ) ಬಂದಿದೆ.

ಈ) 2450 ಉಪನ್ಯಾಸಕರ ಹುದ್ದೆಗಳನ್ನು ಆಯ್ಕೆ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅಂತಿಮ ಆಯ್ಕೆ ಪಟ್ಟಿ ಬಂದ ತಕ್ಷಣ ಕೌನ್ಸೆಲಿಂಗ್ ಮೂಲಕ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು ಹಾಗೂ 1,246 ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಉಪನ್ಯಾಸಕರ ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಬಡ್ತಿ ನೀಡಿದ ನಂತರ ಕೌನ್ಸೆಲಿಂಗ್ ಮೂಲಕ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)**:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ತಾಲ್ಲೂಕಿನಲ್ಲಿ 8 junior colleges ಇವೆ. ಅದರಲ್ಲಿ 2 ನಗರದಲ್ಲಿದ್ದರೆ, 6 ಗ್ರಾಮೀಣ ಪ್ರದೇಶಗಳಲ್ಲಿವೆ. 6 ಗ್ರಾಮೀಣ ಪ್ರದೇಶಗಳಲ್ಲಿ ಇರುವುದರಲ್ಲಿ ಒಂದು ಮೂರು ವರ್ಷಗಳ ಹಿಂದೆ ತೆರೆದಿದ್ದಾರೆ, ಕೆಲವು 2 ವರ್ಷಗಳ ಹಿಂದೆ ತೆರೆದಿದ್ದಾರೆ, ಕೆಲವು ಹೋದ ವರ್ಷ ತೆರೆದಿದ್ದಾರೆ. ಮೂರು ವರ್ಷಗಳ ಹಿಂದೆಯೇ ತೆರೆದಿದ್ದರೂ ಕೂಡ ಒಂದು ಶಾಲೆಯಲ್ಲೂ ಕೂಡ ಪ್ರಾಚಾರ್ಯರಿಲ್ಲ ಮತ್ತು ಒಬ್ಬ ಶಿಕ್ಷಕರೂ ಕೂಡ

ಅಲ್ಲಿ ಇಲ್ಲ. ಇದುವರೆಗೆ ಅವುಗಳನ್ನು ತೆರೆದು ಮೂರು ವರ್ಷವಾಗಿದೆ. ಅಲ್ಲಿಗೆ ಒಬ್ಬ Principal ಇಲ್ಲ. ಶಿಕ್ಷಕರಿಲ್ಲ. ಅಲ್ಲಿಗೆ ಒಬ್ಬರನ್ನು deputation ಮಾಡುತ್ತಾರೆ. ಅವರು ಅಲ್ಲಿಗೆ ಹೋಗಿ ಮಕ್ಕಳಿಗೆ admission ಮಾಡಿಸಿ ವಾಪಸ್ ಹೋಗುತ್ತಾರೆ. ತೆರೆದು ಮೂರು ವರ್ಷಗಳಾದರೂ ಕೂಡ ಅಲ್ಲಿಗೆ ಶಿಕ್ಷಕರನ್ನೇ ಕೊಡುವುದಿಲ್ಲ ಎನ್ನುವುದಾದರೆ, ಅಂತಹ ಶಾಲೆಗಳನ್ನು ತೆರೆಯಬೇಕಾದ ಅವಶ್ಯಕತೆ ಇದೆಯೇ? ಹೋದ ವರ್ಷವೂ ಕೆಲವನ್ನು ತೆರೆದಿದ್ದಾರೆ, ಈ ವರ್ಷವೂ ಒಂದನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲೂ ಅದೇ ಪರಿಸ್ಥಿತಿ ಇದೆ. ನಗರದಲ್ಲಿ ಎರಡು ಕಾಲೇಜುಗಳಿಗೊಬ್ಬ Principal ಮತ್ತು 3 Lecturers ಕೊಟ್ಟಿರುವುದನ್ನು ಬಿಟ್ಟರೆ, ಬೇರೆ ಎಲ್ಲಾ ಕಾಲೇಜುಗಳಲ್ಲಿ Principal ಕೂಡ ಇಲ್ಲ ಮತ್ತು ಒಬ್ಬ Lecturers ಕೂಡ ಇಲ್ಲ. ಬೇರೆಯವರನ್ನು ಅಲ್ಲಿಗೆ deputation ಮಾಡಿಸಿ, ಅಲ್ಲಿ admission ಮಾಡಿಸುತ್ತಾರೆ. ಅವರು ಮತ್ತೆ ವಾಪಸ್ ಹೋಗಿ ಬಿಡುತ್ತಾರೆ. ಹಾಗಾಗಿ ಆ ಶಾಲೆಗಳಲ್ಲಿ ಕಲಿಯತಕ್ಕಂಥ ಮಕ್ಕಳ ಪರಿಸ್ಥಿತಿ ಏನು? ನಾವು ಏನೆಂದು ಜನಗಳಿಗೆ ಉತ್ತರ ಹೇಳಬೇಕು? ನಾವು ಅಲ್ಲಿಗೆ ಹೋದರೆ ನಮ್ಮನ್ನು ಜನರು ಛೇರಾವ್ ಮಾಡುತ್ತಾರೆ. 'ಅಲ್ಲಿಗೆ ಶಿಕ್ಷಕರನ್ನು ಕೊಡುತ್ತೀರೋ? ಇಲ್ಲವೋ? ಎಂದು ಜನರು ಮನೆಗೂ ಸಹ ಬಂದು ಛೇರಾವ್ ಮಾಡುತ್ತಾರೆ. ಇಂತಹ ಪರಿಸ್ಥಿತಿ ನಿರ್ಮಾಣವಾಗುವುದಾದರೆ, ಹೊಸ ಶಾಲೆಗಳನ್ನು ಏಕೆ ತೆರೆಯುತ್ತೀರಿ? ಹೊಸದಾಗಿ ತೆರೆಯುವುದನ್ನು ನಿಲ್ಲಿಸಿ, ಇರುವ ಕಾಲೇಜುಗಳಿಗೆ ಶಿಕ್ಷಕರನ್ನು ಕೊಡಿ. ಈಗ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಅದು ಮುಗಿದ ಮೇಲೆ ಕೊಡುತ್ತೇವೆ ಎಂದರೆ ಆಗುವುದಿಲ್ಲ. ಈಗಾಗಲೇ ಕಾಲೇಜುಗಳು ಪ್ರಾರಂಭವಾಗಿ ಎರಡು ತಿಂಗಳಾಗಿದೆ. ಅವರಿಗೆ ಇನ್ನೂ ಪಾಠಗಳು ಪ್ರಾರಂಭವಾಗಿಲ್ಲ. ಏನಾದರೂ ಅಲ್ಲಿಯವರೆಗೆ ತಾತ್ಕಾಲಿಕ ವ್ಯವಸ್ಥೆ ಮಾಡುತ್ತೀರಾ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಮತ್ತು ಪ್ರಮುಖವಾದಂತಹ ವಿಷಯವಾಗಿದೆ. ನಮ್ಮ ಸರ್ಕಾರ ಈ ವರ್ಷ ಹೊಸದಾಗಿ ಯಾವುದೇ Junior College ಆಗಲಿ ಅಥವಾ Hlgh school ಆಗಲಿ ಮಂಜೂರು ಮಾಡಿಲ್ಲ. ಆದರೆ ಹಿಂದೆ ಏನು ಮಂಜೂರಾಗಿತ್ತು ಅದರಲ್ಲಿ ಈ ಶಿಕ್ಷಕರ ಕೊರತೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಸುಮಾರು 4 ಸಾವಿರ ಶಿಕ್ಷಕರ ಕೊರತೆ ಇದೆ. ನಾವು ಬಹಳ ಗಂಭೀರವಾಗಿ, ಮಾನ್ಯ ಮುಖ್ಯಮಂತ್ರಿಗಳು ನನಗೆ ಈ ಜವಾಬ್ದಾರಿಯನ್ನು ನೀಡಿದ ನಂತರದಲ್ಲಿ, ನಾನು ಬಹಳ ಗಂಭೀರವಾಗಿ ನಮ್ಮ ಇಲಾಖೆಯ ಅಧಿಕಾರಿಗಳೆಲ್ಲರ ಜೊತೆ ನಾವು ಶಿಕ್ಷಕರನ್ನು ಆದ್ಯತೆ ಮೇಲೆ, ಎಲ್ಲಾ Hlgh school ಇರಲಿ, Junior college

ಇರಲಿ, ಅವರಿಗೆ ತಕ್ಷಣದಲ್ಲೇ ಕೊಡಬೇಕು ಎನ್ನುವುದರ ಬಗ್ಗೆ ನಿರ್ಣಯಗಳನ್ನು ಮಾಡಿ, ಅದರ ಬಗ್ಗೆ ಚರ್ಚೆ ಮಾಡಿ, ಈಗ ನಾವು KPSCಗೆ 2450 ಹುದ್ದೆಗಳನ್ನು ತುಂಬುವುದಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಅವರು applications ಕರೆದಿದ್ದಾರೆ. ಈಗಾಗಲೇ application ಕರೆದಿರುವುದು ಮುಗಿದಿದೆ. ಈಗ ಅವರು test ಮಾಡಿ, final list ಕೊಟ್ಟ ನಂತರ ನಾವು ನೇಮಕಾತಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಆದರೆ ಅದುವರೆಗೆ ಮಕ್ಕಳಿಗೆ ತೊಂದರೆಯಾಗುತ್ತದೆ. ಅದಕ್ಕೆ ನಾನು ಈಗ ಒಂದು ಪ್ರಸ್ತಾವನೆಯನ್ನು ನಮ್ಮ ಇಲಾಖೆ ವತಿಯಿಂದ ನಮ್ಮ ಹಣಕಾಸು ಇಲಾಖೆಯ ಎದುರುಗಡೆಯಲ್ಲಿ ಮಂಡಿಸಿದ್ದೇವೆ. ಹೇಗೆ ಡಿಗ್ರಿ ಕಾಲೇಜುಗಳಿಗೆ guest lecturers ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೋ, ಆ ರೀತಿ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಆದರೆ ಹೋದ ಸಲ ನಮ್ಮ ಜೂನಿಯರ್ ಕಾಲೇಜುಗಳಲ್ಲೂ guest lecturers ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೆವು. ಆಗ ಸ್ವಲ್ಪ ವಿಳಂಬವಾಗಿತ್ತು. ಈಗ ತಕ್ಷಣದಲ್ಲಿ finance Department ನಿಂದ clear ಮಾಡಿಸಿ, ಈ ರೀತಿ ನಾವು ನೇಮಕಾತಿ ಪ್ರಕ್ರಿಯೆಯನ್ನೂ ಸಹ ಚುರುಕುಗೊಳಿಸಿದ್ದೇವೆ. ಅದನ್ನೂ ಸಹ ಆದ್ಯತೆ ಮೇಲೆ ಮಾಡುತ್ತೇವೆ. ಆದರೆ guest lecturers ಅನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಕಳುಹಿಸಿದ್ದೇವೆ. ತಕ್ಷಣವೇ ಅವರ ಒಪ್ಪಿಗೆಯನ್ನು ತೆಗೆದುಕೊಂಡು ನಾವು ಅಂತಹ ಎಲ್ಲಾ junior College ಗಳಲ್ಲಿ guest lecturers ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಆಗ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗುವುದಕ್ಕೆ ಅವಕಾಶ ಆಗುತ್ತದೆ. ಆ ರೀತಿಯಲ್ಲಿ ನಮ್ಮ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ನಿಜ, ತೊಂದರೆಯಾಗಿದೆ. ಈ ಸದನದ ಎಲ್ಲಾ ಸದಸ್ಯರ ಭಾವನೆಗಳನ್ನು ತಾವು ವ್ಯಕ್ತಪಡಿಸಿದ್ದೀರಿ. ಈ ಸಮಸ್ಯೆ ಯಾರೋ ಒಬ್ಬ ಸದಸ್ಯರ ಕ್ಷೇತ್ರದಲ್ಲಿಲ್ಲ.....

**ಅಧ್ಯಕ್ಷರು:**– ಮಾನ್ಯ ಸಚಿವರು ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:**– ಮಾನ್ಯ ಅಧ್ಯಕ್ಷರೆ, ತಾವು ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬದ್ಧವಾಗಿದ್ದೇವೆ.

**ಶ್ರೀ ಬಿ. ರಮಾನಾಥ ರೈ:**– ನಮ್ಮ ಬಂಟ್ವಾಳ ತಾಲ್ಲೂಕಿನ ಮಣಿನಾಲ್ಕೂರಿನಲ್ಲಿರುವ Junior College ನಲ್ಲಿ ಒಬ್ಬ in-charge Principal ಇದ್ದಾನೆ. ಆ ಕಾಲೇಜು ಬಹಳ ದುಸ್ಥಿತಿಯಲ್ಲಿದೆ. ಅಲ್ಲಿ ಗ್ರಾಮಸ್ಥರು ಬೀಗ ಹಾಕಿದ್ದಾರೆ. ಅದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅದರ ಬಗ್ಗೆ ಸ್ವಲ್ಪ ನೋಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಪ್ರತಿಯೊಬ್ಬ ಶಾಸಕರ ಕ್ಷೇತ್ರದಲ್ಲೂ ಸಮಸ್ಯೆಗಳಿವೆ. ಅದಕ್ಕಾಗಿಯೇ ನಾನು ಸರ್ಕಾರ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಈಗಾಗಲೇ ಹೇಳಿದ್ದೇನೆ.

**ಶ್ರೀ ನಾಡಗೌಡ ವೆಂಕಟರಾವ್:–** ಮಾನ್ಯ ಅಧ್ಯಕ್ಷರೆ, ಸರ್ಕಾರದವರು guest lecturers ತೆಗೆದುಕೊಳ್ಳುವುದಕ್ಕೆ permission ಕೊಡಿ ಅಥವಾ retired lecturers ತೆಗೆದುಕೊಂಡು, permanent ಮಾಡುವುದಕ್ಕಾದರೂ ಅವಕಾಶ ಕೊಡಿ. ಇಲ್ಲವೆಂದರೆ ಎಲ್ಲಿಂದಾದರೂ deputation ಆದರೂ ಕೊಟ್ಟು, ಅಲ್ಲಿ ಶಾಲೆಗಳನ್ನೂ ನಡೆಸಿ. ನೀವು guest lecturers ಕೊಡುತ್ತೇವೆ ಎನ್ನುವುದಾದರೆ, rural ನಲ್ಲಿ guest lecturers ಯಾರೂ ಕೂಡ ಸಿಗುವುದಿಲ್ಲ. ನೀವು ಪಟ್ಟಣದಲ್ಲಿ ತೆಗೆದುಕೊಳ್ಳಬಹುದು. ಹಳ್ಳಿಯ ಊರುಗಳಲ್ಲಿ guest lecturers ನಿಮಗೆ ಎಲ್ಲಿಂದ ಸಿಗುತ್ತಾರೆ? guest lecturers ತೆಗೆದುಕೊಳ್ಳುವುದಕ್ಕೆ permission ಕೊಟ್ಟರೆ, ನಗರದಲ್ಲಿ ನಿಮಗೆ ಸಿಗಬಹುದು. ಹಳ್ಳಿ ಊರಿನಲ್ಲಿ ಯಾರು guest lecturers ಸಿಗುತ್ತಾರೆ, ಅಲ್ಲಿ ಯಾರು ಬಂದು ಶಾಲೆ ನಡೆಸುತ್ತಾರೆ? ನೀವು ಎಲ್ಲಿಂದಾದರೂ ಅಲ್ಲಿಗೆ ಶಿಕ್ಷಕರನ್ನು ಕೊಡದಿದ್ದರೆ, ಅಲ್ಲಿಯ ವ್ಯವಸ್ಥೆ ನಡೆಯುವುದೇ ಇಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ನಾಡಗೌಡ ವೆಂಕಟರಾವ್‌ರವರು ಏನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಇಡೀ ಸದನದ ಎಲ್ಲಾ ಸದಸ್ಯರ ಭಾವನೆಗಳನ್ನು ಪ್ರತಿಬಿಂಬಿಸುತ್ತಿದ್ದಾರೆ. ಈ ಸಮಸ್ಯೆ ನಿಶ್ಚಿತವಾಗಿ, ಈಗ ತಕ್ಷಣದಲ್ಲಿ ನಮ್ಮನ್ನು ಕಾಡುತ್ತಿದೆ. ಇದಕ್ಕೆ ನಾವು ನೇರ ನೇಮಕಾತಿಗೆ ಬೇಕಾಗಿರುವಂತಹ ಪ್ರಸ್ತಾವನೆಯನ್ನು ಅಂದರೆ ಸುಮಾರು 2500 ಶಿಕ್ಷಕರನ್ನು ನೇಮಕ ಮಾಡಲು, KPSC ಗೆ ಕಳುಹಿಸಿ, ಅವರು application ಕರೆದು, ಎಲ್ಲಾ ಆಗಿದೆ. ಅವರು test ಅನ್ನು ಸದ್ಯದಲ್ಲೇ ಈ ತಿಂಗಳ ಕೊನೆಗೆ ಅಥವಾ ಮುಂದಿನ ತಿಂಗಳು ನಡೆಸಬಹುದು. ಅದರ ಮೂಲಕವೂ ನಾವು ನಮ್ಮ ಪ್ರಯತ್ನವನ್ನು ಮಾಡುತ್ತಿದ್ದೇವೆ. guest lecturers ನೇಮಿಸುವ ಅವಕಾಶವನ್ನೂ ಕೊಡುತ್ತೇವೆ. ನೀವು ಹೇಳಿದಂತೆ ಗ್ರಾಮೀಣ ಭಾಗದಲ್ಲಿ ಸಮಸ್ಯೆಗಳಿವೆ. ತಾವು retired ಆಗಿರುವವರನ್ನು ನೇಮಿಸಿಕೊಳ್ಳಲು ಅವಕಾಶವನ್ನು ಕೊಡಿ ಎಂದು ಕೇಳಿದ್ದೀರಿ. ಅದನ್ನು ಪರಿಶೀಲಿಸಿ ನಾವು ಸೂಕ್ತ ಅವಕಾಶವನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.